ಶ್ರೀ ಕೊಟ್ರ ಬಸವನಗೌಡ.—ತಾವು ಪರಿಶಿಷ್ಟ ದಲ್ಲಿ 4 ವರ್ಷ ಸರ್ವಿಸ್ಸಿನವರಿಗೆ ನೇಮಕಮಾಡಿದೆ ಯೆಂದು ಹೇಳಿದ್ದೀರಲ್ಲಾ, ಅಂದರೆ ಅದಕ್ಕಿಂತ ಹೆಚ್ಚಿಗೆ ಸರ್ವಿಸ್ ಇರುವವರು ಆ ಡಿಸ್ಟ್ರಿಕ್ಟಿನಲ್ಲಿ ಯಾರೂ ಇರಲಿಲ್ಲ ವೆಂದು ತಿಳಿದಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಅವರು ಕ್ರಮಬದ್ಧವಾಗಿ ಸೀನಿಯಾರಿಟಿ ಪ್ರಕಾರ ನೇಮಕಮಾಡಿರುವುದಾಗಿ ನಮಗೆ ತಿಳಿದುಬಂದಿದೆ. ತಾವು ಅಪ್ಲಿಕೇಷನ್ ಕೊಟ್ಟಿದ್ದರೂ ಕೊಡದೆ ಇಂಥವರಿಗೆ ಅನ್ಯಾಯವಾಗಿದೆಯೆಂದು ನಮ್ಮ ಗಮನಕ್ಕೆ ತಂದರೆ ವಿಚಾರಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬಳ್ಳಾರಿ ಮೈಸೂರಿಗೆ ಸೇರಿದ ಮೇಲೆ ಮೈಸೂರು ದೇಶದ ಕಾನೂನಿನ ಪ್ರಕಾರ ಅಲ್ಲಿನ ಎಲ್ಲಾ ಪಂಚಾಯ್ತಿ ಜುನಾ ವಣಿಗಳನ್ನೂ ನಡೆಸಕೂಡದೆ ?

ಶ್ರೀ ಟಿ. ಚನ್ನಯ್ಯ.—ಅದೇ ಬೇರೆ ಪ್ರಶ್ನೆ.

Roads to and from Movageri Panchayet.

Q.—254. **Sri K. KOTRA BASAVANA GOUD** (Kudligi).—

Will the Government be pleased to state :—

(*a*) the population of Movageri Panchayet ;

(*b*) whether they are aware that it is a commercial place ;

(*c*) whether it is being served by any roads either to the taluk headquarters from Hagari Bommanahalli railway station ?

A.—**Sri T. CHANNIAH** (Minister for Public Health and Local Self-Government).—

(*a*) 6,173.

(*b*) Yes.

(*c*) No.

ಶ್ರೀ ಕೊಟ್ರ ಬಸವನಗೌಡ.—ಜನಸಂಖ್ಯೆಯೆಂದರೆ ಪಂಚಾಯ್ತಿಯ ಜನಸಂಖ್ಯೆಯೇ ಅಥವಾ ಆ ಟೌನಿನ ಜನಸಂಖ್ಯೆಯೆ ?

ಶ್ರೀ ಟಿ. ಚನ್ನಯ್ಯ.—ಆ ಗ್ರಾಮದ ಜನಸಂಖ್ಯೆ.

ಶ್ರೀ ಕೊಟ್ರ ಬಸವನಗೌಡ.—ಮಾವಿಗೇರಿ ಗ್ರಾಮ ಮತ್ತು ಅದರ ಸುತ್ತಮುತ್ತಲಿರುವ ಚಿಕ್ಕನಹಳ್ಳಿ ಗ್ರಾಮಗಳ ಜನಸಂಖ್ಯೆಯೆಷ್ಟು ?

ಶ್ರೀ ಟಿ. ಚನ್ನಯ್ಯ.—ಮಾವಿಗೇರಿ ಗ್ರಾಮದ ಜನ ಸಂಖ್ಯೆ ಮಾತ್ರ ಈಗ ಗೊತ್ತು.

ಶ್ರೀ ಕೊಟ್ರ ಬಸವನಗೌಡ.—6,000ಕ್ಕೆ ಮೇಲ್ಪಟ್ಟು ಜನಸಂಖ್ಯೆಯಿರುವ ಗ್ರಾಮಕ್ಕೆ ಒಂದು ರಸ್ತೆಯ ಅನುಕೂಲವೂ ಇಲ್ಲದಿದ್ದರೆ ಬಹಳ ಶೋಚನೀಯವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಗಾಡಿ ಹೋಗತಕ್ಕ ರಸ್ತೆಯಿದೆ. ಮೆಟಲ್‌ಮಾಡಿರುವ ರಸ್ತೆಗಳಿಲ್ಲ ಅಷ್ಟೆ.

ಶ್ರೀ ಕೊಟ್ರ ಬಸವನಗೌಡ.—ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗಬೇಕಾದರೆ ಸರಿಯಾದ ರಸ್ತೆಗಳು ಅವಶ್ಯಕ ಅದಕ್ಕೇನಾದರೂ ಸರ್ಕಾರ ದವರು ಮಾಡಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಈಗ ಗಾಡಿಗಳು ಹೋಗಿಬರುವುದಕ್ಕೆ ಎಷ್ಟುಮಟ್ಟಿನ ರಸ್ತೆಗಳು ಬೇಕೋ ಅಷ್ಟು ಮಟ್ಟಿನ ರಸ್ತೆಗಳಿವೆ. ಮೆಟಲ್‌ಮಾಡಿರುವ ಬೇರೆ ರಸ್ತೆಗಳಾವುವೂ ಇಲ್ಲ. ಈಗ ಎರಡು ತಾಲ್ಲೂಕು ಹೆಡ್ ಕ್ವಾರ್ಟರುಗಳಿಗೂ ಮಧ್ಯೆ ರಸ್ತೆಯನ್ನೇರ್ಪಡಿಸಬೇಕೆಂದು ಹೇಳಿ ಒಂದು proposal ಇದೆ. ಆದರೆ ಇದಕ್ಕೆ ಬಹಳ ಹಣ ಬೇಕಾಗುತ್ತದೆಂದು ಹೇಳಿ ತೆಗೆದುಕೊಂಡಿಲ್ಲ.

ಶ್ರೀ ಕೊಟ್ರ ಬಸವನಗೌಡ.—ತಾಲ್ಲೂಕು ಹೆಡ್ ಕ್ವಾರ್ಟರಿನಿಂದ ಇಲ್ಲಿಗೆ ರೋಡಿಗೆ ಎಸ್ಟಿಮೇಟ್ ತಯಾರಾಗಿದೆಯಲ್ಲಾ, ಅದನ್ನೇನಾದರೂ ಮಂಜೂರು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನಮಗೆ ಬಂದಿರುವ ವರದಿಯ ಪ್ರಕಾರ ಆ ರಸ್ತೆಯನ್ನು ಮಾಡಬೇಕಾದರೆ ಒಂದು ಮೈಲಿಗೆ 6,000 ರೂಪಾಯಿಗಳು ಬೇಕಾಗುತ್ತವೆಂದು ಹೇಳಿದ್ದಾರೆ. 7–8 ಮೈಲಿಗಳಿರುವ ರಸ್ತೆಮಾಡಿಸ ಬೇಕಾದರೆ ಒಂದಕ್ಕೆ 96,000, ಇನ್ನೊಂದಕ್ಕೆ 46,000 ರೂಪಾಯಿಗಳು ಬೇಕಾಗುತ್ತದೆಂದು ಹೇಳಿ ಅವರಿಗೆ ಇಷ್ಟು ಹೆಚ್ಚಿಗೆ ಹಣತಗಲತಕ್ಕ ರಸ್ತೆಯನ್ನು ಮಾಡಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಸಧ್ಯಕ್ಕೆ ಕೈಬಿಡಲಾಗಿದೆ.

ಶ್ರೀ ಕೊಟ್ರ ಬಸವನಗೌಡ.—ಹತ್ತುಸಾವಿರ ಜನಸಂಖ್ಯೆಯಿರತಕ್ಕಂಥ ಗ್ರಾಮಗಳಿಗಾದರೂ ಸರ್ಕಾರ ಒಂದು ರಸ್ತೆಯನ್ನು ಮಾಡಿಕೊಡಬಾರದೇನು ?

ಶ್ರೀ ಟಿ. ಚನ್ನಯ್ಯ.—ದುಡ್ಡಿನ ಸಾಲಭ್ಯವಿದ್ದರೆ ತಾನೆ.

ಶ್ರೀ ಎ. ಭೀಮಪ್ಪನಾಯಕ.—ಬಾಕಿ ಪ್ರದೇಶಗಳಿಗಾದರೆ ಎಷ್ಟೇ ಖರ್ಚಾಗಲಿ ದುಡ್ಡಿದೆ, ಈ ಪ್ರದೇಶಕ್ಕಾದರೆ ತಮಗೆ ದುಡ್ಡಿಲ್ಲವೊ ! ಅಗತ್ಯವಿರುವುದು ಪ್ರಾಮುಖ್ಯವೋ ದುಡ್ಡಿಲ್ಲಾ ಎನ್ನುವುದೊಂದೇ ಪ್ರಾಮುಖ್ಯವೋ ?

ಶ್ರೀ ಟಿ. ಚನ್ನಯ್ಯ.—ರಸ್ತೆಯ ಅಗತ್ಯವೇನೋ ಇದೆ. ಆದರೆ ಅಲ್ಲಿ ಅಗತಕ್ಕ ಪ್ರತಿಯೊಂದು ರಸ್ತೆಗೂ ನುಮಾರು 95–96 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಅಂಥ costly ಅಂದರೆಜುಗಳಿರುವುದರಿಂದ ಹಣದ ಸೌಲಭ್ಯವನ್ನೂ ಕೂಡ ನೋಡಿಕೊಂಡು ರಸ್ತೆಯನ್ನು ಮಾಡಬೇಕಾಗಿದೆ. ಸಧ್ಯಕ್ಕೆ ಆಗಲಾರದು. ಮುಂದೆ ಸಾಧ್ಯವಾದರೆ ಅದನ್ನೂ ಮಾಡೋಣ.

ಶ್ರೀ ಎ. ಭೀಮಪ್ಪನಾಯಕ.—ಒಂದೇ ವರ್ಷಕ್ಕೆ ತಾವೇನೂ ಆ ಕೆಲಸ ಮುಗಿಸಿ ಎಂದು ಹೇಳುವುದಿಲ್ಲ. ಹಾಗೆ ಖರ್ಚು ಜಾಸ್ತಿ ಆಗುವ ಹಾಗಿದ್ದರೆ ಆ ಮೊಬಲಗನ್ನು ಎರಡು ವರ್ಷಗಳಿಗೆ ವಿಭಾಗಮಾಡಿ ಅಲ್ಲಿ ಆ ರಸ್ತೆಯನ್ನು ಪ್ರಾರಂಭಿಸಲು ಏನು ತೊಂದರೆಯಿದೆ ?

ಶ್ರೀ ಟಿ. ಚನ್ನಯ್ಯ.—ಈಗಾಗಲೇ ಈ ರಸ್ತೆಗಳ ಸಲಕರ್ಯಕ್ಕಾಗಿ 20 ಸಾವಿರ ರೂಪಾಯಿಗಳನ್ನು ರೂರಲ್ ಡೆವಲಪ್‌ಮೆಂಟ್‌ನ ಯೋಜನೆಯಲ್ಲಿ ಒದಗಿಸಲಾಗಿದೆ. ಆ ಮೊಬಲಗನ್ನು ಈ ವರ್ಷಾಖ್ಯೆರಿನಲ್ಲಿ ಖರ್ಚುಮಾಡುವಂತೆ ಮಾಡಲು ತೀರ್ಮಾನಿಸಿದ್ದೇವೆ. ಹಾಗೆ ಸಾಧ್ಯವಾಗುವುದಾದರೆ ಆ ರಸ್ತೆ ಕೆಲಸವನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುತ್ತದೆ.

B. V. Krishna Iyengar Road.

Q.—577. **Sri R. ANANTARAMAN** (Chamarajapet).—

Will the Government be pleased to state :—

(*a*) whether the City Improvement Trust Board have contemplated to form

B. V. Krishna Iyengar Road, connecting Arcot Srinivasachar Road to Kempegowda Road ;

(*b*) what steps they have taken in this behalf ?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) A modified scheme is under preparation, as the Scheme that is sent by the Board costs Rs. 24,53,100.

ಶ್ರೀ ಆರ್. ಅನಂತರಾಮ್.—ಈ ರಸ್ತೆಯನ್ನು ಮಾಡಿಸತಕ್ಕ ವಿಚಾರದಲ್ಲಿ ಸರ್ಕಾರದವರು ಎಷ್ಟು ದಿವಸಗಳಿಂದ ಹೀಗೆ ಆಲೋಚನೆ ನಡೆಸುತ್ತಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಆರ್. ಅನಂತರಾಮ್.—ತಮಗೆ ಬಂದಿರುವ ಪ್ರಪೋಸಲ್ಸ್ ಪ್ರಕಾರ ಈ ರಸ್ತೆಯ ಉದ್ದ-ಅಗಲ ಎಷ್ಟು ?

ಶ್ರೀ ಟಿ. ಚನ್ನಯ್ಯ.—ಆ ವಿವರಗಳೂ ಕೂಡ ನನ್ನಲ್ಲಿಲ್ಲ.

ಶ್ರೀ ಆರ್. ಅನಂತರಾಮ್.—ಕಾರ್ಪೊರೇಷನ್ನಿನವರು ಕೊಟ್ಟಿರುವ ವರದಿಯಲ್ಲಿ ಈ ವಿವರಗಳೆಲ್ಲಾ ಇಲ್ಲವೇ ?

ಶ್ರೀ ಟಿ. ಚನ್ನಯ್ಯ —ಈ ರಸ್ತೆಯನ್ನು 1940ರಿಂದ ಲೂ ಮಾಡಿಸಿಕೊಡಬೇಕೆಂಬುದಾಗಿ ಪ್ರಪೋಸಲ್ಸ್ ಇದೆ ಈ ಬಗ್ಗೆ 2-3 ಪ್ರಪೋಸಲ್ಸ್‌ಗಳು ಬಂದಿವೆ. ಒಂದರಲ್ಲಿ ಈ ರಸ್ತೆಯ ಅಗಲ 50 ಅಡಿಗಳಿರಬೇಕೆಂದೂ ಮತ್ತು 10 ಅಡಿಗಳ ಪಾದಚಾರಿಗಳ ರಸ್ತೆ ಕೂಡ ಇರಬೇಕೆಂದೂ ತಿಳಿಸಿದೆ. ಎರಡನೆಯ ಪ್ರಪೋಸಲ್‌ನಲ್ಲಿ 130 ಅಡಿ ಅಗಲವಿರಬೇಕೆಂದು ಕೇಳಲಾಗಿದೆ. ಮೂರನೆಯ ಪ್ರಪೋಸಲ್‌ನಲ್ಲಿ 230 ಅಡಿಗಳ ಅಗಲವಿರಬೇಕೆಂದು ತಿಳಿಸಲಾಗಿದೆ.

Sri R. ANANTARAMAN.—What is the modified proposal ?

ಶ್ರೀ ಟಿ. ಚನ್ನಯ್ಯ.—ಅಜ್ಜರು ತೀರ್ಮಾನದಲ್ಲಿ 230 ಅಡಿಗಳೇ ಇರಬೇಕೆಂದು ಹೇಳಿದ್ದಾರೆ. ಇದರಿಂದ ಅಕ್ಕ ಪಕ್ಕದಲ್ಲಿರುವ ಅನೇಕ ಮನೆಗಳನ್ನು ಕೆಡವಬೇಕಾಗಿದೆ. ಅವರೂ ಸಹ ಅವರ ಅನಾನುಕೂಲಗಳನ್ನು ಅರಿಕೆಮಾಡಿ ಕೊಂಡಿದ್ದಾರೆ.

Sri R. ANANTARAMAN.—When are you going to take up this scheme ?

Sri T. CHANNIAH.—It is under the active consideration of the Government.

Sri V. M. MASCARENHAS.—Have the Government taken a final decision in the matter that the road shall be 230 feet wide ?

Sri T. CHANNIAH.—Government have not yet taken a decision.

Sri V. M. MASCARENHAS.—Who else has taken a decision about the width being 230 feet ?

Sri T. CHANNIAH.—That is the recommendation made by the Committee.

Sri V. M. MASCARENHAS.—Unfortunately the Trust Board has made such a recommendation.....

Sri T. CHANNIAH.—Not the Trust Board, but the Committee appointed by the Corporation.

Sri V. M. MASCARENHAS.—Did that Committee realise that if that scheme is put into effect, more than Rs. 70 lakhs are to be spent by the Trust Board or by the Government and it cannot be self-supporting ?

Sri T. CHANNIAH.—According to the latest proposal, it will be a self-supporting scheme and whether this scheme or the second proposal costing Rs. 24,53,100 has to be implemented by them, is under the active consideration of Government.

Sri V. M. MASCARENHAS.—If the figure of Rs. 150 a square yard is assumed, which is absolutely unworkable, will the scheme be self-supporting ?

Sri T. CHANNIAH.—All those aspects are being considered by Government.

ಶ್ರೀ ಪಿ. ಆರ್. ರಾಮಯ್ಯ.—ಈ ರಸ್ತೆ ಇನ್ನೂ ಆಗದೆ ಇರುವುದರಿಂದ ಪ್ರಯಾಣಿಕರಿಗೆ ತುಂಬಾ ಅನಾನುಕೂಲವುಂಟಾಗಿದೆ ಎಂಬ ವಿಚಾರ ಸರ್ಕಾರದವರ ಅವಗಾಹನೆಗೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಪಿ. ಆರ್. ರಾಮಯ್ಯ.—ಸರ್ಕಾರದವರು ಇದರ ವಿಚಾರವಾಗಿ ಬಹಳ ತಾತ್ಸಾರ ಭಾವನೆಯಿಂದ ವರ್ತಿಸುತ್ತಿದ್ದಾರಲ್ಲವೇ ?

Mr. SPEAKER.—Government are delaying.

Sri. T. CHANNIAH.—Government have not been delaying. There are divergent views on the proposal. The residents of the area are agitating against that proposal. For these reasons, the scheme has not been finalised.

ಶ್ರೀ ಪಿ. ಆರ್. ರಾಮಯ್ಯ.—ಈ ರಸ್ತೆ ನಿರ್ಮಾಣದ ಜವಾಬ್ದಾರಿ ಅಜ್ಜರಾಗಿ ಸರ್ಕಾರದವರ ಮೇಲೆ ಬಿದ್ದಿರುವುದರಿಂದ ಸರ್ಕಾರದವರು ಇದನ್ನು ತಾತ್ಸಾರಭಾವನೆಯಿಂದ ನೋಡುತ್ತಿದ್ದಾರೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಈ ವಿಚಾರದಲ್ಲಿ ಒಂದು ತೀವ್ರ ತೀರ್ಮಾನ ತೆಗೆದುಕೊಳ್ಳಬೇಕಾದರೆ ಈಗ ಹಾಲಿ ಅಲ್ಲಿರತಕ್ಕ ಮನೆಯವರ ಅಭಿಪ್ರಾಯವನ್ನೂ ನಾವು ತೆಗೆದುಕೊಳ್ಳಬೇಕಾಗಿದೆ. ಜೊತೆಗೆ ಹಣದ ಅನುಕೂಲತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಕೆಲಸವನ್ನು ಆದಷ್ಟು ಬೇಗ ಕೈಕೊಳ್ಳಲು ಸರ್ಕಾರಕ್ಕೂ ಆಸಕ್ತಿಯಿದೆ.

ಶ್ರೀ ಪಿ. ಆರ್. ರಾಮಯ್ಯ.—ಹಾಗಾದರೆ ಆ ಮನೆಯವರೆಲ್ಲರೂ ಒಪ್ಪುವತನಕ ಈ ರಸ್ತೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಬಡವರ ಮನೆಗಳನ್ನು ಡಿಮಾಲಿಷ್ ಮಾಡಬೇಕಾಗಿದ್ದರೆ ಆ ಅಂಶವನ್ನು ನಾವು ಹೆನ್ನಾಗಿ ಪರಿಶೀಲಿಸಬೇಕಲ್ಲವೇ ?

ಶ್ರೀ ಪಿ. ಆರ್. ರಾಮಯ್ಯ.—ಹೀಗೆ ಈ ವಿಷಯವನ್ನು ಇನ್ನೂ ಎಷ್ಟು ದಿವಸಗಳವರೆಗೆ ಇಟ್ಟುಕೊಂಡಿರುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಈಗ ಅಲ್ಲಿ ಡಿಮಾಲಿಷ್‌ಮಾಡಬೇಕಾದ ಮನೆಗಳೆಷ್ಟು ; ಅವರಿಗೇನು ಪರಿಹಾರ ಕೊಡಬೇಕು ; ಮನೆಯಿಲ್ಲದ ಜನರಿಗೆ ಎಲ್ಲಿ ಬೇರೆ ನಿವೇಶನಗಳನ್ನು ಒದಗಿಸಬೇಕು, ಜಾಗ ಎಲ್ಲಿದೆ ಎಂಬ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಲು ಕೊಂಚಕಾಲ ಹಿಡಿಯುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಈ ವರ್ಷದಲ್ಲಾದರೂ ಇದನ್ನು ಆಖೈರುಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆದಷ್ಟು ಜಾಗ್ರತೆ ಮಾಡುತ್ತೇವೆ.

Road from Magadi to join Bangalore-Mangalore Road *via* Bychapura—Somadevanahalli.

Q.—**675.** **Sri S. SIDDAPPA** (Magadi).—

Will the Government be peased to state:—

(*a*) whether they have received requests for the formation of a road from Magadi to join the Bangalore-Mangalore Road *via* Bychapura, Thaggikuppe, Byalakere and Somadevanahalli;

(*b*) whether Government have accorded sanction;

(*c*) if so, the reasons why this work has not been taken up?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) Yes, for the formation of a length of four miles only.

(*c*) The work has been taken up and an outlay of Rs. 5,045 incurred.

ಶ್ರೀ ಎಸ್. ಸಿದ್ದಪ್ಪ.—ಈ ರಸ್ತೆ ಪೂರೈಸಲು ಎಷ್ಟು ದಿವಸಗಳು ಬೇಕಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—ಈಗಾಗಲೆ 4 ಮೈಲಿ ರಸ್ತೆ ಕೆಲಸ ಕೈಗೊಳ್ಳಲು 1947ರಲ್ಲೇ 8,700 ರೂ. ಗಳನ್ನು ಮಂಜೂರುಮಾಡಲಾಗಿದೆ. ಈಗ ಎಷ್ಟು ಹಣವನ್ನೊದಗಿಸಲಾಗಿದೆಯೋ ಅದಕ್ಕೆ ಆಗುವಷ್ಟು ಕೆಲಸವನ್ನು ಮಾಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ.

ಶ್ರೀ ಎಸ್. ಸಿದ್ದಪ್ಪ.—ತಾವು ಹೇಳಿರುವ ಪ್ರಕಾರ ಅಷ್ಟು ಹಣ ಈಗ ಈ ರಸ್ತೆಗಾಗಿ ಖರ್ಚಾಗಿಲ್ಲವೆಂದು ನಾನು ಈ ಸಭೆಯ ಮೂಲಕ ತಮಗೆ ಅರಿಕೆಮಾಡಿಕೊಂಡರೆ ಆಗಲಾದರೂ ತಾವು ಈ ರಸ್ತೆಯನ್ನು ಉತ್ತಮಗೊಳಿಸಲು ಪ್ರಯತ್ನಪಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಒದಗಿಸಲಾಗಿದ್ದ ಹಣ ಪೂರ್ತಿಯಾಗಿ ಖರ್ಚಾಗದೆ ಇನ್ನೂ ಉಳಿದಿದ್ದರೆ ಅದೆಲ್ಲವನ್ನೂ ಖರ್ಚುಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೆ ತಿಳುವಳಿಕೆ ಕೊಡಲಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಈ ರಸ್ತೆ ಕೆಲಸಮಾಡಿಸಿದ್ದು ಜಿಲ್ಲಾಬೋರ್ಡಿನ ಫಂಡಿನಿಂದಲೋ ಅಥವಾ ಐ. ವಿ. ಸಿ. ಫಂಡಿನಿಂದಲೋ ?

ಶ್ರೀ ಟಿ. ಚನ್ನಯ್ಯ.—ಇದು ಜಿಲ್ಲಾಬೋರ್ಡಿನ ಕೆಲಸವಲ್ಲ. ಇದು ಇಂಟರ್ ವಿಲೇಜ್ ಕಮ್ಯುನಿಕೇಷನ್‌ಗೆ ಸಂಬಂಧಪಟ್ಟ ವಿಷಯವಾಗಿದೆ.

ಶ್ರೀ ಎಸ್. ಸಿದ್ದಪ್ಪ.—ಸರ್ಕಾರದವರ ಅಜ್ಞೆ ಮೇರೆಗೆ ಈಗ ಈ ರಸ್ತೆ ಕೆಲಸ ಕೈಗೊಳ್ಳಲಾಗಿದೆ ಎಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಟಿ. ಚೆನ್ನಯ್ಯ.—ಅದನ್ನು ವಿಚಾರಮಾಡುತ್ತೇನೆ.

ಶ್ರೀ ಎಸ್. ಸಿದ್ದಪ್ಪ.—ಪ್ರತಿ ಜಿಲ್ಲೆಗೂ $2\frac{1}{2}$ ಲಕ್ಷ ರೂಪಾಯಿಗಳ ಮೊಬಲಗನ್ನು ಖರ್ಚುಮಾಡಿ ಹೆಚ್ಚಾಗಿ ಹಳ್ಳಿಗಳಿಗೆ ರಸ್ತೆಗಳನ್ನು ಕಲ್ಪಿಸಿಕೊಡುವುದಕ್ಕೆ ಸರ್ಕಾರದವರು ತೀವ್ರವಾದ ಆಸಕ್ತಿಯನ್ನು ವಹಿಸಿಕೊಳ್ಳುತ್ತಾರೆಯೇ ?

ಶ್ರೀ ಟಿ. ಚನ್ನಯ್ಯ.—ಅದನ್ನು ಪರ್ಯಾಲೋಚಿಸುತ್ತೇವೆ.

Central Middle School at Nagasandra, Gubbi Taluk.

Q.—**146.** **Sri C. M. ANNAYAPPA** (Gubbi).—

Will the Government be pleased to state:—

(*a*) from how many years the proposal for the Central Middle School at Nagasandra of Gubbi Taluk is being received;

(*b*) the reasons why the proposal has not been approved even though proposals are being sent from prior to 1947;

(*c*) whether it is a fact that they have promised the grant of a school building and a school?

A.—**Sri A. G. RAMACHANDRA RAO** (Minister for Law and Education).—

(*a*) It was received only in February 1955.

(*b*) Does not arise in view of reply to (*a*).

(*c*) No.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—10 ವರ್ಷಗಳಿಂದಲೂ ಬಂದ ಸಲಹೆ ಏನಾಯಿತು? 1955ನೇ ಇಸವಿ ಫೆಬ್ರುವರಿ ತಿಂಗಳಲ್ಲಿ ಮಾತ್ರ ಈ ಸಲಹೆ ಬಂತು ಎಂದು ಹೇಳಿದ್ದೀರಿ. 10 ವರ್ಷಗಳಿಂದಲೂ ಒಂದೇ ಸಮನಾಗಿ ಸಲಹೆ ಬಂದಿಲ್ಲವೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಜವಾಬು ಹೇಳಿದ್ದೇವೆ. ನಮಗೆ ಸಲಹೆ ಬಂದಿರುವುದು 1955ನೇ ಇಸವಿ ಫೆಬ್ರವರಿ ತಿಂಗಳಲ್ಲಿ.

*Indicates that the remarks or speech have not been revised by the Member concerned.